ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಅವಶ್ಯಕತೆ ಕಂಡು ಬಂದಿಲ್ಲ.

ಇ) ಅ) ಹಣದ ದುರುಪಯೋಗವಾಗಿರುವುದಿಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯ ರಸ್ತೆಗಳಲ್ಲಿ ಒಂದೇ ವಾಹನ ಹೋಗುವ ಸೇತುವೆಗಳು

1735 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿರುವ ರಸ್ತೆಗಳಲ್ಲಿ ಬರುವ ಪ್ರಮುಖ ರಹದಾರಿಗಳಲ್ಲಿರುವ ಒಂದೇ ವಾಹನ ಹಾಯ್ದು ಹೋಗುವಂತೆ ಸೇತುವೆಗಳಿಂದ ಹೆಚ್ಚು ಅಪಘಾತವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು?*

ಆ) *ವಿಜಾಪುರ ತಾಲ್ಲೂಕಿನಲ್ಲಿ ಬರುವ ಇಂತಹ ಸೇತುವೆಗಳ ಸಂಖ್ಯೆ ಎಷ್ಟು; ಅವು ಯಾವ ಯಾವ ರಸ್ತೆಗಳಲ್ಲಿ ಬರುತ್ತವೆ?*

ಇ) *ವಿಜಾಪುರ ಸಿಂಧಗಿ ರಸ್ತೆಯಲ್ಲಿ ಕಲ್ಬುರ್ಗಿ ಬೀದರಿಗೆ ಹೋಗುವ ರಸ್ತೆಯಲ್ಲಿ ಅತಿಯಾದ ವಾಹನಗಳ ತಿರುಗಾಟವಿದ್ದು ಒಂದೇ ವಾಹನ ಹಾಯ್ದು ಹೋಗುವ ಸೇತುವೆಯಲ್ಲಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಸರಕಾರವು ಯಾವಾಗ ಕ್ರಮ ಕೈಗೊಳ್ಳುವುದು (ಪೂರ್ತಿ ವಿವರ ನೀಡುವುದು)*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ. ಲಭ್ಯವಿರುವ ಅನುದಾನದಲ್ಲಿ ಹಂತ ಹಂತವಾಗಿ ಪುನರ್ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು.

ಆ) ರಾಜ್ಯ ಹೆದ್ದಾರಿಗಳ ಮೇಲೆ, ಈ ತರಹದ 20 ಸೇತುವೆಗಳಿವೆ. ಇವುಗಳಲ್ಲಿ ರಾಜ್ಯ ಹೆದ್ದಾರಿಗಳಾದ ಜೇವರ್ಗಿ-ಚಿಕ್ಕೋಡಿ-ಸಂಕೇಶ್ವರ (ರಾ.ಹೆ.ನಂ.12) ರಸ್ತೆ ಮೇಲೆ 18 ಸೇತುವೆಗಳು ಹಾಗೂ ತಿಕೋಟಾ-ಕನಮಡಿ-ಜತ್ (ರಾ.ಹೆ.ನಂ.12ಅ) ರಸ್ತೆ ಮೇಲೆ 2 ಸೇತುವೆಗಳು ಬರುತ್ತವೆ.

ಇ) ಹೌದು. ವಿಜಾಪುರದ ಸಿಂಧಗಿ ರಸ್ತೆ (ಜೇವರ್ಗಿ-ಚಿಕ್ಕೋಡಿ-ಸಂಕೇಶ್ವರ ರಸ್ತೆ) ಯಲ್ಲಿಯ ಕಿ.ಮೀ. 130.10, 124.00, 116.00 105.10, 106.80ರಲ್ಲಿಯ (5) ಸೇತುವೆಗಳನ್ನು ವಿವಿಧ

ಕಾರ್ಯಕ್ರಮಗಳ ಅಡಿಯಲ್ಲಿ ಈಗಾಗಲೇ ಅಗಲಗೊಳಿಸಲಾಗಿದೆ. ಇನ್ನುಳಿದ ರಸ್ತೆಯ ಮೇಲೆ ಬರುವ ಸೇತುವೆಗಳನ್ನು ಲಭ್ಯವಿರುವ ಅನುದಾನದಲ್ಲಿ ಅಗಲಗೊಳಿಸಲಾಗುವುದು.

ಪ್ರತಿ ವಿಧಾನಸಭಾ ಕ್ಷೇತ್ರದ ಲೋಕೋಪಯೋಗಿ ಕಾಮಗಾರಿಗಳು

1736 - ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರತಿ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯಲ್ಲಿ 30 ಲಕ್ಷ ರೂಪಾಯಿಗಳ ಲೋಕೋಪಯೋಗಿ ಕಾಮಗಾರಿ ತೆಗೆದುಕೊಳ್ಳುವ ಕಾರ್ಯಕ್ರಮ ಸ್ಥಗಿತ ಗೊಳಿಸಲಾಗಿದೆಯೇ?*

ಆ) *ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ರಸ್ತೆಗಳು ಸೇತುವೆಗಳು ಮತ್ತು ಕಟ್ಟಡಗಳ ಸಾರ್ವಜನಿಕ ಅತ್ಯಂತ ಅವಶ್ಯಕತೆ ಅನುಗುಣವಾಗಿ ಶಾಸಕರು ಸೂಚಿಸುವ ಅವಕಾಶ ತಪ್ಪಿ ಸಮಸ್ಯೆಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಪ್ರಸಕ್ತ ವರ್ಷ ಮತ್ತೆ ಈ ಕಾರ್ಯಕ್ರಮ ಪ್ರಾರಂಭಿಸಲಾಗುವುದೇ; ಪ್ರಾರಂಭಿಸಲಾಗದಿದ್ದಲ್ಲಿ ಕಾರಣಗಳೇನು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಯೋಜನೆ 1997-98ನೇ ಸಾಲಿಗೆ ಪೂರೈಸಿದ್ದು ಮುಂದುವರೆದ ಕಾಮಗಾರಿಗಳಿಗೆ 2.50 ಕೋಟಿ ರೂ.ಗಳನ್ನು 1998-99ನೇ ಸಾಲಿನಲ್ಲಿ ನಿಗದಿ ಪಡಿಸಲಾಗಿದೆ.

ಆ) ವಿಧಾನಸಭಾ ಕ್ಷೇತ್ರದಡಿಯಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಪ್ರಸ್ತಾವಿಸಲಾಗುತ್ತಿದ್ದು ಈಗ ಇತರೆ ಯೋಜನೆಗಳು ಅಂದರೆ ನಬಾರ್ಡ್‌ನಡಿಯಲ್ಲಿ ರಾಜ್ಯಾದಂತ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸಮಸ್ಯೆಗಳು ಆಗುತ್ತಿರುವುದಿಲ್ಲ.

ಇ) ಈ ಸಾಲಿನಲ್ಲಿ ಪ್ರಾರಂಭಿಸಿರುವುದಿಲ್ಲ ಹಾಗೂ (ಆ) ನಲ್ಲಿ ಉತ್ತರಿಸಿದಂತೆ ಇದೇ ರಾಜ್ಯದಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣ ಕಾರ್ಯಕ್ರಮ ನಬಾರ್ಡ್‌ನಡಿಯಲ್ಲಿ ಪ್ರಸ್ತಾವಿಸಿದ್ದು, ಪ್ರತ್ಯೇಕ ವಿಧಾನಸಭಾ ಮತ ಕ್ಷೇತ್ರ ಯೋಜನೆ ಅವಶ್ಯಕತೆ ಕಾಣಬರುವುದಿಲ್ಲ.

ವಿಜಾಪುರ ಒಳಾಂಗಣ ಕ್ರೀಡಾಂಗಣ

1737- ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಇಲಾಖೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?